ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ     ದಿನಾಂಕ : DATE : 09/03/2020

# ಯತ್ನಾಳರನ್ನೇ ಸ್ಪೀಕರ್ ಸ್ಥಾನದಲ್ಲಿ ಕೂಡಿಸಿ!

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರ ಬಗ್ಗೆ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪಾಕಿಸ್ತಾನ ಏಜೆಂಟ್ ಎಂದು ಹೇಳಿದ್ದ ಹೇಳಿಕೆ ವಿಧಾನಸಭೆಯಲ್ಲಿ ಸಾಕಷ್ಟು ಗದ್ದಲಕ್ಕೆ ಕಾರಣವಾಗಿತ್ತು. ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರಂತೂ ಯತ್ನಾಳ್ ಅವರ ವಿರುದ್ಧ ಕ್ರಮ ಕೈಗೊಂಡು ಅವರನ್ನು ಸದನದಿಂದ ಹೊರ ಹಾಕಲೇಬೇಕು ಎಂದು ಪಟ್ಟು ಹಿಡಿದು ಹೋರಾಟ ನಡೆಸಿದ್ದರು. ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರಂತೂ ಯತ್ನಾಳ್ ಅವರನ್ನು ಸದನದಿಂದ ಹೊರ ಹಾಕದಿದ್ದರೆ ಸದನವೇ ನಡೆಯಲು ಬಿಡುವುದಿಲ್ಲ ಎಂದು ಘರ್ಜಿಸುತ್ತಿದ್ದರು.

ಕಾಂಗ್ರೆಸ್‌ನವರು ಸದನದ ಬಾವಿಯಲ್ಲಿ ನಿಂತು ಬಸನಗೌಡ ಪಾಟೀಲ್ ಯತ್ನಾಳ ವಿರುದ್ಧ ಘೋಷಣೆ ಕೂಗುತ್ತಿದ್ದರೆ ಆಡಳಿತ ಪಕ್ಷದ ಮೊಗಸಾಲೆಯಲ್ಲಿ ಕುಳಿತಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಆಡಳಿತ ಪಕ್ಷದ ಶಾಸಕರು ಭೇಟಿ ಮಾಡಿ ಅಭಿನಂದನೆ ಸಲ್ಲಿಸುತ್ತಿದ್ದರು. ನೀವೊಬ್ಬರಾದ್ರೂ ಧೈರ್ಯ ಮಾಡಿ ಹೇಳಿದೀರಾ. ನಾವು ನಿಮ್ ಜೊತೆ ಇದ್ದೇವೆ ಎಂದು ವಿಶ್ ಮಾಡುವುದು ಸಾಮಾನ್ಯವಾಗಿತ್ತು.

ಕಾಂಗ್ರೆಸ್‌ನವರು ಎರಡು ದಿನವಾದರೂ ತಮ್ಮ ಪ್ರತಿಭಟನೆಯಿಂದ ಹಿಂದೆ ಸರಿಯದೇ ಗಲಾಟೆ ಮುಂದುವರೆಸಿದ್ದರಿಂದ ಬಿಜೆಪಿಯ ಹಿರಿಯ ಸದಸ್ಯರೊಬ್ಬರು ಬಸನಗೌಡ ಯತ್ನಾಳ್ ಅವರನ್ನೇ ಸ್ಪೀಕರ್ ಕುರ್ಚಿಯಲ್ಲಿ ಕೂಡುವ ತಂಡದಲ್ಲಿ ಕೂಡಿಸಿದ್ರೆ, ಅವರೇ ಗಲಾಟೆ ಮಾಡುವವರನ್ನ ಸದನದಿಂದ ಹೊರ ಹಾಕುತ್ತಾರೆ ಎಂದು ಸಲಹೆ ಕೊಟ್ಟಿದ್ದರಂತೆ. ಕಡೆಗೆ ಸ್ಪೀಕರ್ ಕಾಗೇರಿಯವರೇ ಚರ್ಚೆಗೆ ಅವಕಾಶ ಕೊಡದಿದ್ದಾಗ ಕಾಂಗ್ರೆಸ್‌ನವರು ರಾಜ್ಯಪಾಲರಿಗೆ ದೂರು ನೀಡಿ ಸಮಾಧಾನ ಪಟ್ಟುಕೊಳ್ಳುವಂತಾಯಿತು.